JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮಣ್ಣಿಗೆ ಸೇರಿಸಿ ಬಿಡೋಣ: 'ಗುರುವಿನ ಜೋಳಿಗೆ' ಕೃತಿಯ ತಾತ್ವಿಕತೆ

ಡಾ. ಮಂಜುಳ ಎಂ.ಕೆ.
ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕುಣಿಗಲ್.

**ಕವಿ ದುಗ್ಗೇನಹಳ್ಳಿ ಸಿದ್ದೇಶರವರ ಗುರುವಿನ ಜೋಳಿಗೆ ಕವನ ಸಂಕಲನವು ಸಮಾಜದಲ್ಲಿ ಹೊಸಕಾಲದಲ್ಲಿ ಮಾನವೀಯ ಮೌಲ್ಯಗಳನ್ನು ಮಾನವೀಯ ಸಂಬಂಧಗಳ ಹಿನ್ನೆಲೆಯಲ್ಲಿ ಶೋಧನೆಗೆ ಒಳಪಡಿಸುತ್ತದೆ. ತನ್ಮೂಲಕ ಸಮಾಜದ ಅನಿಷ್ಟಗಳನ್ನು ಹೊರದೋಡಿಸಬೇಕಾದ ಅಗತ್ಯವನ್ನು ಸಾರುತ್ತದೆ. ಮಾನಸಿಕ ಹಿಂಸೆ, ದೈಹಿಕ ಕಿರುಕುಳ, ಅನಾಚಾರ, ಅಕ್ರಮ, ಲೈಂಗಿಕ ದೌರ್ಜನ್ಯ ಇತ್ಯಾದಿ. ಇಂತಹ ವಿಷಯುಕ್ತ ಮನಸ್ಸುಗಳನ್ನು 'ಮಣ್ಣಿಗೆ ಸೇರಿಸಿಬಿಡೋಣ' ಎಂಬ ಕೈಂಕರ್ಯವನ್ನು ಎಲ್ಲರೂ ಹೊಂದಿ ಜವಾಬ್ದಾರಿಯುತ ಪ್ರಜೆಗಳಾಗಿ ಸಮಾಜದ ಶಾಂತಿ-ನೆಮ್ಮದಿಗೆ ಎಲ್ಲರೂ ಶ್ರಮಿಸಬೇಕಾಗಿದೆ.**

---

ತುಮಕೂರು ಜಿಲ್ಲೆ, ಕೊರಟಗೆರೆ ತಾ|| ಹೊಳವನಹಳ್ಳಿ ಹೋಬಳಿ, ದುಗ್ಗೇನಹಳ್ಳಿಯ ರೈತಾಪಿ ಕುಟುಂಬದ ಜಯರಾಮಯ್ಯ ಲಲಿತಮ್ಮನವರ ಮಗನಾಗಿ ದುಗ್ಗೇನಹಳ್ಳಿ ಸಿದ್ದೇಶ ೧೯೮೭ ಮಾರ್ಚ್ ೦೩ ರಂದು ಜನಿಸಿದರು. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಕೊರಟಗೆರೆಯಲ್ಲಿ ಪದವಿ ಪೂರ್ವ ಶಿಕ್ಷಣ ಮತ್ತು ಪದವಿ ಶಿಕ್ಷಣ ತುಮಕೂರಿನ ಸಿದ್ದಾರ್ಥ ಮಹಾವಿದ್ಯಾಲಯದಿಂದ ಬಿ.ಇಡಿ ಪದವಿ ಹಾಗು ತುಮಕೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಸ್ನಾತಕೋತ್ತರ ಪದವಿಯನ್ನು ಪಡೆದರು. ಮನೆಯಲ್ಲಿ ಅಪ್ಪನ ತತ್ವಪದ ಆಲಿಸುತ್ತಾ ಬೆಳೆದ ಅವರಿಗೆ ಕಾವ್ಯ ರಚನೆಯ ಮಾರ್ಗದರ್ಶನ ಡಾ. ಎಸ್ ನಟರಾಜ ಬೂದಾಳು ಅವರಿಂದ ದೊರೆಯಿತು.

ಕರ್ನಾಟಕ ಸರ್ಕಾರದ ರಾಷ್ಟ್ರೀÃಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರವು ಕೈಗೆತ್ತಿಕೊಂಡಿದ್ದ ಮಹತ್ವದ ಯೋಜನೆ 'ಕರ್ನಾಟಕದ ಸಮಗ್ರ ತತ್ವಪದಗಳ ಜನಪ್ರಿಯ ಮಾಲೆ' ಯೋಜನೆಯಲ್ಲಿ ತುಮಕೂರು ಜಿಲ್ಲೆಯ ಕ್ಷೇತ್ರ ತಜ್ಞರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಪ್ರಸ್ತುತ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾದ ಶೇಷಾದ್ರಿಪುರಂ ಕಾಲೇಜು, ತುಮಕೂರು ಅಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕಾವ್ಯ, ಕತೆ, ವಚನ ವಿಮರ್ಶೆ ಮೀಮಾಂಸೆಯನ್ನು ಮುಖ್ಯವಾಗಿಟ್ಟುಕೊಂಡು ಸಾಹಿತ್ಯ ಕೃಷಿಯಲ್ಲಿ ನಿರತರಾಗಿದ್ದಾರೆ. ಈಗಾಗಲೇ ಅವರು 'ಹಸಿ ಮಣ್ಣಿನ ಹಾಡು' 'ನುಡಿವ

ಹಂಸ' ಕವನ ಸಂಕಲನಗಳು, ಸಂಪಾದಿತ ಕೃತಿ 'ದೇಸಿ ಕಥನಗಳು', ಸೀಳುದಾರಿಯ ಸಂಕಥನಗಳು 'ಅಳಿಲು ಬಿಳಲು', 'ನೆಲದ ಕಣ್ಣುಗಳು' ಸಂಶೋಧನ ಲೇಖನಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ರಾಜ್ಯ-ರಾಷ್ಟ್ರ-ಅಂತಾರಾಷ್ಟ್ರÃಯ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಈಗ ಅವರ ಬಿಡಿ ಕವಿತೆಗಳನ್ನು ಒಟ್ಟುಗೂಡಿಸಿ 'ಗುರುವಿನ ಜೋಳಿಗೆ' ಎಂಬ ಕವನ ಸಂಕಲನವನ್ನು ಸಾಹಿತ್ಯ ಕ್ಷೇತ್ರಕ್ಕೆ ಸೇರಿಸಿದ್ದಾರೆ.

ಕವಿಯ ಜೀವನ ಸಮರ್ಪಕವಾದ ಸಂಸ್ಕಾರದಿAದ ಕೂಡಿದೆ. ಸಂಸ್ಕಾರಕ್ಕೆ ಮುಖ್ಯ ಕಾರಣ ಮನೆಯ ವಾತಾವರಣ ಅಪ್ಪ ಅಂದ್ರೆ ಆಕಾಶ, ಅವ್ವ ಅಂದ್ರೆ ಭೂಮಿ ಎಂಬ ಮಾತಿದೆ. ಅಂತೆಯೇ ಕವಿಯ ಅಪ್ಪ ಕವಿಗೆ ಆಕಾಶದಷ್ಟು ವಿಶಾಲವಾದ, ವಿಸ್ತಾರವಾದ-ಪ್ರೀತಿ, ಕಾಳಜಿ, ತಿಳಿವಳಿಕೆ, ಸಲಹೆ, ಮಾರ್ಗದರ್ಶನ ನೀಡಿರುವ ಮಹಾನುಭಾವರು. ಕುಟುಂಬದಲ್ಲಿ ಎಲ್ಲರ ಪಾತ್ರವೂ ಮುಖ್ಯವೆ. ಹಾಗೆಯೇ ಅಪ್ಪನ ಪಾತ್ರ ಕೂಡ ಬಹಳ ಪ್ರಮುಖವಾದದ್ದು. "ತಂದೀಯ ನೆನೆದರೆ ತಂಗಳ ಬಿಸಿಯಾಯ್ತು".

"... ಹಡೆದಂಥ ತಂದೆ ತಾಯೆಲ್ಲಿ ಸಿಕ್ಕಾರ" ಜನಪದ ಸಾಲುಗಳು ಅನ್ವರ್ಥವಾಗಿವೆ.

ಅಪ್ಪ

ನನ್ನ ಅಪ್ಪ<br>
ಶಾಲೆಯಲ್ಲಿ ಕಲಿತದ್ದು ಕಡಿಮೆ<br>
ಬದುಕಿನಲ್ಲಿ ಕಲಿತದ್ದು ಹೆಚ್ಚು.<br>
ನನ್ನ ಅಪ್ಪ<br>
ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್<br>
ಯಾರನ್ನು ಓದಿಲ್ಲ.<br>
ಆದರೆ ಅವರಂತೆ ಬದುಕುತ್ತಿರುವವ<br>
ನನ್ನ ಅಪ್ಪ<br>
ಬಡತನದಲ್ಲಿ ಬೆಂದು ಬೆಂದು<br>
ಕಾದ ಕಬ್ಬಿಣವಾದವ<br>
ಅದೇ ಮುಂದೆ ನಮ್ಮ ಬದುಕಿಗೆ ಆಯುಧ.<br>
ನನ್ನ ಅಪ್ಪ<br>
ನಾನು ಶಾಲೆಗೆ ಹೋಗುವಾಗ<br>
ಹೆಗಲ ಮೇಲೆ ಹೊತ್ತುಕೊಂಡು<br>
ಜಯಮAಗಲಿ ಹೊಳೆ ದಾಟಿಸುವಾಗ<br>
ಕೆಂಪು ನೀರಿಗೆ ಬೆಚ್ಚಿಬಿದ್ದಾಗ<br>
ನನ್ನ ಬಿಗಿಡಿದವ<br>
ನನ್ನ ಅಪ್ಪ

ಗುಡುಗು ಮಿಂಚಿನ ಆರ್ಭಟದಲ್ಲಿ

ಸೋರುವ ಸೂರಿನಲ್ಲಿ

ಅಮ್ಮನ ಸೆರಗಿನಲ್ಲಿ ಪಿಳಿಪಿಳಿ

ಕಣ್ಣು ಬಿಡುತ್ತಿದ್ದಾಗ ಬಾಚಿ ಅಪ್ಪಿದವ

ನನ್ನ ಅಪ್ಪ

ಹರಿದ ಬನಿಯನ್ ಚಪ್ಪಲಿ,

ತೊಟ್ಟರೂ

ನಮಗೆ ಹೊಸ ಗರಿಗರಿ ಬಟ್ಟೆ ಕೊಡಿಸಿದವ

ನನ್ನ ಅಪ್ಪ

ಹೇಳಿಕೊಟ್ಟ ಬದುಕಿನ ಬೀಜಮಂತ್ರ ಇಷ್ಟೆ

ನಮಗೆ ಕೆಡಕು ಬಗೆದವರಿಗೂ

ಒಳಿತನ್ನೇ ಬಯಸು ಅಷ್ಟೆ.

**(ಗುರುವಿನ ಜೋಳಿಗೆ, ದುಗ್ಗೇನಹಳ್ಳಿ ಸಿದ್ದೇಶ, ಪ್ರ.ಮುದ್ರಣ ೨೦೨೫, ಪ್ರಕಾಶಕರು ಜಯಮಂಗಲಿ ಪ್ರಕಾಶನ, ತುಮಕೂರು, ಪುಟ ೧೯-೨೦.)**

ಕವಿಯ ಅಪ್ಪನಿಗೆ ಶಿಕ್ಷಣ ಕಡಿಮೆಯಾದರೂ ಸಂಸ್ಕಾರ ಹೆಚ್ಚು ಹೊಂದಿದ್ದರು. ಮಹಾನ್ ಚೇತನಗಳ ಬಗ್ಗೆ ಓದದಿದ್ದರೂ ಅವರಂತೆ ಜೀವಿಸುತ್ತಿದ್ದರು. ಬಡತನದ ಬೆಂಕಿಯನ್ನು ಬೆಳಕು ಮಾಡಿಕೊಂಡು ಅಸ್ತ್ರವಾಗಿಸಿಕೊಂಡವರು. ಮಗನನ್ನು ಶಾಲೆಗೆ ಹೆಗಲ ಮೇಲೆ ಕೂರಿಸಿಕೊಂಡು ಸುರಕ್ಷಿತವಾಗಿ ಕರೆದುಕೊಂಡು ಹೋಗುವಾಗ ತನಗಿಂತ ಎತ್ತರವಾದ ಬದುಕು ಕಂದನದಾಗಲಿ ಎಂಬ ಆಶಯವಿದೆ. ಪ್ರಾಕೃತಿಕ ಶಬ್ದಗಳಿಂದ ಮಗ ಹೆದರಿದಾಗ ಬಾಚಿ ತಬ್ಬಿ ಅಭಯವನ್ನು ನೀಡಿದ್ದಾರೆ. ತಾನು ಹರಿದ ಬಟ್ಟೆ ಚಪ್ಪಲಿ ಹಾಕಿದರೂ ಮಗನಿಗೆ ಹೊಸಬಟ್ಟೆ ಕೊಡಿಸಿರುವುದು ದ್ಯೋತಕವಾಗಿದೆ. ಅಪ್ಪನ ಜೀವನದ ಬೀಜಮಂತ್ರ—"ನಮಗೆ ಕೆಡುಕು ಬಗೆದವರಿಗೂ ಒಳಿತನ್ನೇ ಬಯಸು ಅಷ್ಟೆ" ಎಂಬ ಮಾತು ಜನಪದರ-

"ಆಚಾರಕ್ಕೆ ಅರಸನಾಗು ನೀತಿಗೆ ಪ್ರಭುವಾಗು

ಮಾತಿನಲ್ಲಿ ಚೂಡಾಮಣಿಯಾಗು,

ಜಗಕ್ಕೆಲ್ಲ ಜ್ಯೋತಿಯಾಗು ನನ್ನ ಕಂದ"

ಹರಕೆಯ ಜೀವನ ಮಂತ್ರವನ್ನು ಸ್ಮರಿಸುತ್ತದೆ. ಸಮಾಜಕ್ಕೆ ಬೇಕಾದ ಜೀವನ ಮೌಲ್ಯಗಳನ್ನು, ಸಂಸ್ಕೃತಿಯನ್ನು ಕಾಪಾಡಲು ಹಾಗೂ ಅತ್ಯುತ್ತಮ ನಾಗರಿಕರಾಗಲು ಪ್ರೇರೇಪಿಸುವ ಸಂದೇಶವಾಗಿದೆ. ಇಂತಹ ಸಂಸ್ಕಾರವನ್ನು ಮೈಗೂಡಿಸಿಕೊಂಡಿರುವ ಮಗ (ಕವಿ).

"ಮಣ್ಣಿಗೆ ತುಳಿದು ಬಿಡೋಣ"

ಸಖಿ

ಸತ್ತವರ ರಕ್ತದಲ್ಲಿದ್ದ ಪ್ರೇಮ

ಕೊಂದವರ ಹೃದಯದಲ್ಲಿ ಏಕಿರಲಿಲ್ಲ

ಒಂದೇ ಭೂಮಿ

ಒಂದೇ ಗಾಳಿ

ಒಂದೇ ಜಲ

ಎಲ್ಲರೂ ಮನುಷ್ಯರೇ

ಕೊಂದವರ ಹೃದಯದಲ್ಲಿ

ಎಂಥ ವಿಷವಿರಬಹುದು

ಈ ರಕ್ತ ಪಿಪಾಸುಗಳ

ಎದೆಯಲ್ಲಿ ವಿಷ ಬಿತ್ತಿದವ

ಯಾವ ಲೋಕದವ

ಮಣ್ಣಿಗೆ ತುಳಿದುಬಿಡೋಣ

ಗೊಬ್ಬರವಾಗಲಿ ಈ ಕಸಗಳು.

**(ಗುರುವಿನ ಜೋಳಿಗೆ, ದುಗ್ಗೇನಹಳ್ಳಿ ಸಿದ್ದೇಶ, ಪ್ರ.ಮುದ್ರಣ ೨೦೨೫, ಪ್ರಕಾಶಕರು ಜಯಮಂಗಲಿ ಪ್ರಕಾಶನ, ತುಮಕೂರು, ಪುಟ-೯೪.)**

ಕವನದಲ್ಲಿ ಬದುಕಿಗೆ ಅತ್ಯವಶ್ಯಕವಾದ ಮನುಷ್ಯತ್ವದ ಸಾಲುಗಳನ್ನು ಚಿತ್ರಿಸಿದ್ದಾರೆ. "ಸತ್ತವರ ರಕ್ತದಲ್ಲಿದ್ದ ಪ್ರೇಮ ಕೊಂದವರ ಹೃದಯದಲ್ಲಿ ಏಕಿರಲಿಲ್ಲ"--- ಎಂಬ ಧ್ವನಿಗೆ ಹತನಾದ ಕ್ಯಾಪ್ಟನ್ ಪ್ರಾಂಜಲ್ ಅವರ ತಾಯಿಯೇ ಬರೆದ ಅಳಲಿನ ಕವಿತೆ ಸಾಕ್ಷಿಯಾಗಿದೆ.

ಓ ಪ್ರಕೃತಿಯೇ ... ಹಣ್ಣೆಲೆಗಳು ಸರದಿಯಲ್ಲಿರುವಾಗ

ನೀನೇಕೆ ಎಳೆ ಚಿಗುರ ಕಸಿದು ಕೊಂಡೆ?

ಬೆಳೆದು ಹೆಮ್ಮರವಾಗಬೇಕಾದ ಚಿಕ್ಕ ಗಿಡವ

ಚಿವುಟಿ ನೀನೇನ ಪಡೆದುಕೊಂಡೆ?

ಓ ರಕ್ತ ಪಿಪಾಸಿ ಉಗ್ರಗಾಮಿಗಳೇ ... ನಿಮಗೇಕೆ

ಈ ಕೊನೆಯಿಲ್ಲದ ದಾಹ?

ಎಂದೆAದಿಗೂ ಸಾಧಿಸಲಾಗದ, ನಿಮಗೆಂದಿಗೂ ದೊರಕದ,

ನಮ್ಮೀ ಮಾತೃಭೂಮಿಯ ಮೇಲೆ ಏಕೀ ವ್ಯಾಮೋಹ?

ನಿಮ್ಮನ್ನು ಪ್ರಚೋದಿಸಿ ಕಳುಹಿಸಿದ ಸ್ವಾರ್ಥಿಗಳಿಗೆ

ಎಂದು ಆಗುವುದು ಜ್ಞಾನೋದಯ?

ಎಲ್ಲರಿಗೂ ಬದುಕುವ ಹಕ್ಕು ಪ್ರಕೃತಿಯು ನೀಡಿರುವಾಗ

ನಿಮಗೇಕೆ ಅತಿಕ್ರಮಿಸುವ ಈ ದುಷ್ಟ ಸಂಪ್ರದಾಯ?

ನಮ್ಮ ಕಣ್ಣೆದುರೇ ಬೆಳೆದ ಈ ಕಂದ ಪ್ರಾಂಜಲನ ಜೀವ

ಕಸಿಯುವ ಹಕ್ಕ ನಿಮಗೆ ನೀಡಿದವರಾರು?

ಕೇಳಿಸದೇ ನಿಮಗೆ ಹೊತ್ತು ಹೆತ್ತ ತಾಯಿಯ ಆಕ್ರಂದನ?

ಕಾಣಿಸದೇ, ದುಃಖವ ನುಂಗಿ ಕಣ್ಣೀರು ತಡೆದುಕೊಂಡ ತಂದೆಯ ದುಮ್ಮಾನ?

ಅನಿಸುವುದಿಲ್ಲವೇ, ಕೈ ಹಿಡಿದ ಬಾಳ ಸಂಗಾತಿಯ ಎಣೆಯಿಲ್ಲದ ಗೋಳು?

ಎಲ್ಲಿ ದೊರೆಯುವುದು ಇದಕ್ಕೆ ಉತ್ತರ?

ಪ್ರಕೃತಿ ಎಲ್ಲರಿಗೂ ಒಂದೆ. ಎಲ್ಲರೂ ಮನುಷ್ಯರೇ? (ದೇಹವಿದ್ದರೆ ಪ್ರಾಣಿ ಮಾನವೀಯತೆಯಿದ್ದರೆ ಮನುಷ್ಯ) ಕೊಂದವರು ಮನುಷ್ಯರೇ ಆಗಿದ್ರಾ ಎಂಬ ಪ್ರಶ್ನೆ ಕಾಡುತ್ತದೆ.

"ಎದೆಯಲ್ಲಿ ವಿಷ ಬಿತ್ತಿದವ ಯಾವ ಲೋಕದವ ಮಣ್ಣಿಗೆ ತುಳಿದು ಬಿಡೋಣ ಗೊಬ್ಬರವಾಗಲಿ ಈ ಕಸಗಳು". ಈ ಅರ್ಥಪೂರ್ಣವಾದ ಸಾಲಿಗೆ ಅನುಗುಣವಾಗಿ ಸಮಾಜದಲ್ಲಿ ನಡೆಯುತ್ತಿರುವ ಅನೇಕ, ಅಮಾನವೀಯ ಕೃತ್ಯಗಳನ್ನು ಕೂಲಂಕಷವಾಗಿ ಗಮನಿಸಿದರೆ.

೧)**ಮರ್ಯಾದೆ ಗೇಡು ಹತ್ಯೆ**- ಬೆಳಗಾವಿ ಜಿಲ್ಲೆಯ ವೀರಾಪುರ ಗ್ರಾಮದ ಶ್ರೀಮತಿ ಮಾನ್ಯ ಪಟೇಲ್ ೬ ತಿಂಗಳ ಗರ್ಭಿಣಿ ಅಂತರ್‌ಜಾತೀಯ ವಿವಾಹದಿಂದ ತಂದೆಯಿAದಲೇ ಹತ್ಯೆಗೆ ಒಳಗಾಗಿದ್ದಾಳೆ (**ಪ್ರಜಾವಾಣಿ ೩೧ ಜನವರಿ ೨೦೨೬**). ಹೀಗೆ ಹತ್ತು ಹಲವು ಹೃದಯ ವಿದ್ರಾವಕ ಘಟನೆಗಳು ನಡೆದಿವೆ.

೨)**ಕೊಲೆ :**- ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ಅಕ್ಷಯ್ ಎಂಬ ಮಗ ತಂದೆ-ತಾಯಿ (ಭೀಮರಾಜ್-ಜಯಮ್ಮ) ಮತ್ತು ತಂಗಿ (ಅಮೃತಾ) ಯನ್ನು ಹತ್ಯೆ ಮಾಡಿ ವಾಸವಿದ್ದ ಬಾಡಿಗೆ ಮನೆಯಲ್ಲೇ ಗುಂಡಿ ತೋಡಿ ಹೂತಾಕಿದ್ದಾನೆ. ಕಾರ್ಯಕ್ರಮಕ್ಕೆ ಆಹ್ವಾನವಿಲ್ಲದೆ ಊಟಕ್ಕೆ ಹೋದ ಬಡ ಹುಡುಗನಿಗೆ ಹೊಡೆದು ಕೊಂದಿದ್ದಾರೆ. ಬೈಕ್ ಹುಡುಗ ಕಾರಿಗೆ ಬೈಕ್ ತಾಗಿಸಿದ್ದಕ್ಕೆ ಕಾರಿನಲ್ಲಿದ್ದ ಗಂಡ-ಹೆAಡತಿ ೨ ಕಿ.ಮೀ. ಹಿಂಬಾಲಿಸಿ ಹುಡುಗನಿಗೆ ಹೊಡೆದು ಕೊಂದಿದ್ದಾರೆ. ಅನೈತಿಕ ಸಂಬAಧ ವಿಚಾರವಾಗಿ ಕಲಹ: ರಕ್ಷಣೆಗೆ ಬಂದವನನ್ನು ಹತ್ಯೆ ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಅವರಗೊಪ್ಪದಲ್ಲಿ ಕೌಟುಂಬಿಕ ಕಾರಣಕ್ಕೆ ಮಗನೇ ತಂದೆ-ತಾಯಿಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ. ವೈದ್ಯ ಪತಿಯೇ ವೈದ್ಯ ಪತ್ನಿಗೆ ಅರಿವಳಿಕೆಯ ಚುಚ್ಚುಮದ್ದು ನೀಡಿ ಕೊಂದಿದ್ದಾನೆ....

ಮೇಲಿನವುಗಳನ್ನು ಸಹಿಸಲು ಅಸಾಧ್ಯವಾಗಿರುವುದರಿಂದ ಹಾಗೂ ಮಾನಸಿಕ ಹಿಂಸೆ, ದೈಹಿಕ ಕಿರುಕುಳ, ಅನಾಚಾರ, ಅಕ್ರಮ, ಲೈಂಗಿಕ ದೌರ್ಜನ್ಯ ಇತ್ಯಾದಿ. ಇಂತಹ ವಿಷಯುಕ್ತ ಮನಸ್ಸುಗಳನ್ನು 'ಮಣ್ಣಿಗೆ ಸೇರಿಸಿಬಿಡೋಣ' ಎಂಬ ಕೈಂಕರ್ಯವನ್ನು ಎಲ್ಲರೂ ಹೊಂದಿ ಜವಾಬ್ದಾರಿಯುತ ಪ್ರಜೆಗಳಾಗಿ ಸಮಾಜದ ಶಾಂತಿ-ನೆಮ್ಮದಿಗೆ ಎಲ್ಲರೂ ಶ್ರಮಿಸಬೇಕಾಗಿದೆ.

**ಪರಾಮರ್ಶನ** :-

ಪ್ರಜಾವಾಣಿ ದಿನಪತ್ರಿಕೆ.